# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 179(157) |
| ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 10.12.2024 |
| ಉತ್ತರಿಸಬೇಕಾದವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮ ನಕ್ಷೆಗಳ ಪ್ರಕಾರ ಯಾವುದೇ ಜಮೀನು / ಸರ್ವೆ ನಂಬರ್‌ಗಳಲ್ಲಿರುವ ನೈಸರ್ಗಿಕ ನೀರಿನ ಮೂಲಗಳನ್ನು (ನದಿ, ತೊರೆ, ರಾಜಕಾಲುವೆ, ನಾಲೆ, ಹಳ್ಳ ಕೊರಕಲು ಇತ್ಯಾದಿಗಳನ್ನು) ಸಂಪೂರ್ಣ ಅಥವಾ ಬಾಗಶಃ ಮುಚ್ಚಿ ಅಥವಾ ನೈಸರ್ಗಿಕ ಸಂರಚನೆಯ ಪಥ ಬದಲಾವಣೆ ಮಾಡಿ ಅಂಥಹ ಜಾಗದಲ್ಲಿ ಮತ್ತು ಅಲ್ಲಿನ ಬಫರ್ ವಲಯದಲ್ಲಿ ರಸ್ತೆ, ಆಟದ ಮೈದಾನ, ಪಾರ್ಕ್, ನಿವೇಶನ ಮತ್ತು ಕಟ್ಟಡ ನಿರ್ಮಾಣ ಮಾಡಲು ನಗರ ಯೋಜನಾ ಇಲಾಖೆಯ ಕಾಯ್ದೆಗಳಲ್ಲಿ ಅವಕಾಶವಿದೆಯೇ; ಅವಕಾಶವಿದ್ದಲ್ಲಿ ಅಥವಾ ಇಲ್ಲದಿದ್ದಲ್ಲಿ ಈ ಸಂಬಂಧ ರೂಪಿಸಲಾಗಿರುವ ನಿಯಮಗಳ ಬಗ್ಗೆ ದಾಖಲೆ ಸಹಿತ ಮಾಹಿತಿ ನೀಡುವುದು. | ನದಿ ಮತ್ತು ಜಲಕಾಯಗಳ ಬಫರ್‌ನಲ್ಲಿ ಅಳವಡಿಸಬಹುದಾದ ಚಟುವಟಿಕೆಗಳ ಕುರಿತು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 15 ಟಿಟಿಪಿ 2015, ದಿನಾಂಕ:21.04.2020 ರ ಲ್ಲಿ ವಿವರಿಸಲಾಗಿರುತ್ತದೆ (ಅನುಬಂಧ-ಅ). |
| ಆ) | ಗ್ರಾಮ ನಕ್ಷೆಗಳ ಪ್ರಕಾರ ಯಾವುದೇ ಜಮೀನು / ಸರ್ವೆ ನಂಬರ್‌ಗಳಲ್ಲಿರುವ ನೀರಿನ ಮೂಲಗಳ (ನದಿ, ಕೆರೆ, ಜಲಾಶಯ, ರಾಜಕಾಲುವೆ, ನಾಲೆ, ಹಳ್ಳ ಇತ್ಯಾದಿ) ಎಷ್ಟು ಅಡಿ / ಮೀಟರ್‌ಗಳವರೆಗೆ ಬಫರ್ ವಲಯವೆಂದು ನಿಗಧಿಪಡಿಸಲಾಗುತ್ತದೆ? (ದಾಖಲೆ ಸಹಿತ ಮಾಹಿತಿ ನೀಡುವುದು) | ಕೆರೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸುತ್ತೋಲೆ ದಿನಾಂಕ:13.03.2018ರ ನಿಯಮದಂತೆ ಕೆರೆ ಸುತ್ತಲೂ 30.0 ಮೀ ಬಫರ್ ಅಳವಡಿಸಲಾಗುತ್ತಿದೆ **(ಅನುಬಂಧ-ಬ).** ಆಯಾ ನಗರಾಭಿವೃದ್ಧಿ ಪ್ರಾಧಿಕಾರ / ಯೋಜನಾ ಪ್ರಾಧಿಕಾರ/ ಪುರಸಭೆ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ ವಲಯನಿಯಮಾವಳಿಗಳಲ್ಲಿ ಬಫರ್ ಕಾಯ್ದಿರಿಸುವ ಬಗ್ಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. |

**ಸಂಖ್ಯೆ: ನಅಇ 292 ಬೆಂರೂಪ್ರಾ (ಇ)**

(**ಬಿ.ಎಸ್. ಸುರೇಶ**)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಅನುಬಂಧ-ಅ

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಕರ್ನಾಟಕ ಸರ್ಕಾರ,
ಬಹುಮಹಡಿಗಳ ಕಟ್ಟಡ, ಗೇಟ್-4,
ಪಿ.ಬಿ.ನಂ. 5257,
ಡಾ. ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು-560001


ಕರ್ನಾಟಕ ಸರ್ಕಾರ

# ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ

ಬಹುಮಹಡಿಗಳ ಕಟ್ಟಡ, ಗೇಟ್-4, ಪಿ.ಬಿ.ನಂ.5257, ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು-560 001.
ದೂರವಾಣಿ ಸಂಖ್ಯೆ:22258988, 22353976, ಫ್ಯಾಕ್ಸ್ ಸಂಖ್ಯೆ:22389519
ಇ-ಮೇಲ್:dtcp@karnataka.gov.in ವೆಬ್‌ಸೈಟ್:www.dtcp.gov.in


ಸಂಖ್ಯೆ: DTCP-TECH0LALC/95/2024(E-1601942) 3441 04 DEC 2024

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಮಾನ್ಯರೆ

**ವಿಷಯ:** ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎಸ್. ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ:179(157) ಕ್ಕೆ ಉತ್ತರಗಳನ್ನು ಸಲ್ಲಿಸುವ ಕುರಿತು.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ: ಎಲ್‌ಸಿಕ್ಯೂ:157:154ನೇಅ:2024 ದಿನಾಂಕ: 25-11-2024.

********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎಸ್. ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ:179(157) ಕ್ಕೆ ಉತ್ತರಗಳನ್ನು ಸಿದ್ಧಪಡಿಸಿ ಸರ್ಕಾರದ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ದ್ವಿಪ್ರತಿಗಳಲ್ಲಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ

ThippeswamyNK 3/12/2024
(ಎನ್.ಕೆ.ತಿಪ್ಪೇಸ್ವಾಮಿ)
ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎಸ್. ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ:179(157) ಕ್ಕೆಉತ್ತರಗಳು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಗ್ರಾಮ ನಕ್ಷೆಗಳ ಪ್ರಕಾರ ಯಾವುದೇ ಜಮೀನು/ಸರ್ವೆ ನಂಬರ್‌ಗಳಲ್ಲಿರುವ ನೈಸರ್ಗಿಕ ನೀರಿನ ಮೂಲಗಳನ್ನು (ನದಿ, ತೊರೆ, ರಾಜಕಾಲುವೆ, ನಾಲೆ, ಹಳ್ಳ, ಕೊರಕಲು ಇತ್ಯಾದಿಗಳನ್ನು) ಸಂಪೂರ್ಣ ಅಥವಾ ಭಾಗಶಃ : ಮುಚ್ಚಿ ಅಥವಾ ನೈಸರ್ಗಿಕ ಸಂರಚನೆಯ ಪಥ ಬದಲಾವಣೆ ಮಾಡಿ ಅಂಥಹ ಜಾಗದಲ್ಲಿ ಮತ್ತು ಅಲ್ಲಿನ ಬಫರ್ ವಲಯದಲ್ಲಿ ರಸ್ತೆ, ಆಟದ ಮೈದಾನ, ಪಾರ್ಕ್, ನಿವೇಶನ ಮತ್ತು ಕಟ್ಟಡ ನಿರ್ಮಾಣ ಮಾಡಲು ನಗರ ಯೋಜನಾ ಇಲಾಖೆಯ ಕಾಯ್ದೆಗಳಲ್ಲಿ ಅವಕಾಶವಿದೆಯೇ; ಅವಕಾಶವಿದ್ದಲ್ಲಿ ಅಥವಾ ಇಲ್ಲದಿದ್ದಲ್ಲಿ ಈ ಸಂಬಂಧ ರೂಪಿಸಲಾಗಿರುವ ನಿಯಮಗಳ ಬಗ್ಗೆ ದಾಖಲೆ ಸಹಿತ ಮಾಹಿತಿ ನೀಡುವುದು; | 1. ಸರ್ಕಾರಿ ಹಳ್ಳವನ್ನು ಮುಚ್ಚಿ ಅಥವಾ ನೈಸರ್ಗಿಕ ಸಂರಚನೆಯ ಪಥ ಬದಲಾವಣೆ ಮಾಡುವ ವಿಷಯವು ಈ ಇಲಾಖೆಯ ಕಾರ್ಯವ್ಯಾಪ್ತಿಗೆಒಳಪಡದೇ ಇರುವುದರಿಂದ ಈ ಇಲಾಖೆಯಿಂದ ಯಾವುದೇ ಆದೇಶ ಹೊರಡಿಸಿರುವುದಿಲ್ಲ.<br>2. ನದಿ ಮತ್ತು ಜಲಕಾಯಗಳ ಬಫರ್‌ನಲ್ಲಿ ಅಳವಡಿಸಬಹುದಾದ ಚಟುವಟಿಕೆಗಳ ಕುರಿತು ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 15 ಟಿಟಿಪಿ 2015 ದಿನಾಂಕ: 21-04-2020 ರಲ್ಲಿವಿವರಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) |
| ಆ. | ಗ್ರಾಮ ನಕ್ಷೆಗಳ ಪ್ರಕಾರ ಯಾವುದೇ ಜಮೀನು/ಸರ್ವೆ ನಂಬರ್‌ಗಳಲ್ಲಿರುವ ನೀರಿನ ಮೂಲಗಳ (ನದಿ, ಕೆರೆ, ಜಲಾಶಯ, ರಾಜಕಾಲುವೆ, ನಾಲೆ, ಹಳ್ಳ ಇತ್ಯಾದಿ) ಎಷ್ಟು ಅಡಿ/ಮೀಟರ್ ಗಳವರೆಗೆ ಬಫರ್ ವಲಯವೆಂದು ನಿಗಧಿಪಡಿಸಲಾಗುತ್ತದೆ; (ದಾಖಲೆ ಸಹಿತ ಮಾಹಿತಿ ನೀಡುವುದು) | 1. ಕೆರೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿಪ್ರಾಧಿಕಾರದ ಸುತ್ತೋಲೆ ದಿನಾಂಕ: 13-03-2018ರ ನಿಯಮದಂತೆ ಕೆರೆ ಸುತ್ತಲೂ 30.0 ಮೀ ಬಫರ್ ಅಳವಡಿಸಲಾಗುತ್ತಿದೆ.<br>2. ನೈಸರ್ಗಿಕವಾಗಿ ಹರಿಯುವ ನದಿ, ರಾಜ ಕಾಲುವೆ, ನಾಲಾ, ಹಳ್ಳಗಳಿಗೆ ಸಂಬಂಧಿಸಿದಂತೆ ಬಫರ್ ಕಾಯ್ದಿರಿಸುವ ಕುರಿತು ರಾಜ್ಯ ವ್ಯಾಪ್ತಿ ಅನ್ವಯಿಸುವಂತೆ ಏಕರೂಪವಾಗಿ ಯಾವುದೇ ಅಧಿಸೂಚನೆ/ನಿಯಮಗಳನ್ನು ಹೊರಡಿಸಿರುವುದಿಲ್ಲ.<br>ಆದರೆ ಆಯಾ ನಗರಾಭಿವೃದ್ಧಿ ಪ್ರಾಧಿಕಾರ/ಯೋಜನಾ ಪ್ರಾಧಿಕಾರ/ಪುರಸಭೆ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ ವಲಯನಿಯಮಾವಳಿಗಳಲ್ಲಿ ಬಫರ್ ಕಾಯ್ದಿರಿಸುವ ಬಗ್ಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. |

Thippeswamy K 3/12/2024

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು

ಅನುಬಂಧ-೬

# ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ

ಕರ್ನಾಟಕ ಸರ್ಕಾರ

ಸಂಖ್ಯೆ : ಕ.ಕೆ.ಸಂ.ಅ.ಪ್ರಾ/ಬೆಂ/ತಾಂತ್ರಿಕ/08/2017-18 ದಿನಾಂಕ : 13.03.2018

## ಸುತ್ತೋಲೆ

ವಿಷಯ : ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅನುಮೋದನೆ/ಅನುಮತಿ ಕೋರಿ ಸಲ್ಲಿಸುವ ವಿವರವಾದ ಯೋಜನಾ ವರದಿ (DPR) ಸಿದ್ಧ ಪಡಿಸುವಾಗ ಕಡ್ಡಾಯವಾಗಿ ಪರಿಗಣಿಸಬೇಕಿರುವ ಪ್ರಮುಖ ಅಂಶಗಳು :-

1. ನೀರನ್ನು ಸಂಗ್ರಹಿಸುವುದಕ್ಕಾಗಿ ಅಥವ ಹಿಡಿದಿಟ್ಟುಕೊಳ್ಳುವುದಾಗಿ ಅಥವ ಜಲಜೀವ ವೈವಿಧ್ಯ, ಜಲಪಕ್ಷಿಗಳು ಮತ್ತು ಜಲೀಯ ಸಸ್ಯಗಳನ್ನು ಸುಧಾರಿಸುವ ಮತ್ತು ಅವುಗಳಿಗೆ ಬೇಕಾದ ಪರಿಸರವನ್ನು ಸೃಜಿಸಲು ಹೊರತಾಗಿ ಇತರ ಯಾವುದೇ ಉದ್ದೇಶಕ್ಕಾಗಿ ಕೆರೆಯನ್ನು ಬಳಸತಕ್ಕದ್ದಲ್ಲ.
2. ಕೆರೆ ಭೂಮಿಯ ಮೇಲೆ ಯಾವುದೇ ರಚನೆಯನ್ನು ನಿರ್ಮಿಸತಕ್ಕದ್ದಲ್ಲ, ಯಾವುದೇ ಕೆರೆ ಭೂಮಿಯನ್ನು ಅಥವ ಅದರ ಯಾವುದೇ ಭಾಗವನ್ನು ಅಧಿಭೋಗಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.
3. ಕೆರೆಗೆ ಹರಿದು ಬರುತ್ತಿರುವ ಅಥವ ಕೆರೆಯಿಂದ ನೀರು ಹರಿದು ಹೋಗುತ್ತಿರುವ ಸ್ವಾಭಾವಿಕ ಹರಿವುಗಳಿಗೆ ಯಾವುದೇ ಅಡ್ಡಿಯನ್ನು ಉಂಟು ಮಾಡತಕ್ಕದ್ದಲ್ಲ.
4. ಕೆರೆಯ ಹೊರಗಿನ ಸರಹದ್ದಿನಿಂದ ಮೂವತ್ತು ಮೀಟರುಗಳೊಳಗೆ ಯಾವುದೇ ವಾಣಿಜ್ಯ, ಮನರಂಜನೆ ಅಥವ ಕೈಗಾರಿಕಾ ಸಂಕೀರ್ಣಗಳನ್ನು ಅಥವ ಮನೆಗಳನ್ನು ಕಟ್ಟತಕ್ಕದ್ದಲ್ಲ.
5. ಕೆರೆಯ ಒಡ್ಡು ಸೇರಿದಂತೆ ಕೆರೆ ಪ್ರದೇಶದೊಳಗೆ ರಸ್ತೆಗಳನ್ನು, ಸೇತುವೆಗಳನ್ನು, ಮತ್ತು ಅದೇ ರೀತಿಯ ಇತರ ರಚನೆಗಳನ್ನು ಸರ್ಕಾರದ ಮತ್ತು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಇಲ್ಲದೆ ನಿರ್ಮಿಸತಕ್ಕದಲ್ಲ. ಅತ್ಯಂತ ಅವಶ್ಯವಾದ ರಸ್ತೆಗೆ ಸಂಬಂಧಿಸಿದ ರಚನೆಗಳನ್ನು ನಿರ್ಮಿಸಬೇಕಿದ್ದಲ್ಲಿ ಅವುಗಳಿಂದ ಕೆರೆಯ ವಿನ್ಯಾಸಿತ ಸಾಮರ್ಥ್ಯವನ್ನು ಪುನರ್ ಸ್ಥಾಪಿಸಲು ತೆಗೆದುಕೊಳ್ಳಲಾಗುವ ಕ್ರಮಗಳ ಪ್ರಸ್ತಾವನೆಗಳೊಂದಿಗೆ ಸರ್ಕಾರ ಹಾಗೂ ಪ್ರಾಧಿಕಾರದ ಅನುಮೋದನೆಗಾಗಿ ಸಲ್ಲಿಸುವುದು,
6. ಕೆರೆ ಗಡಿಗಳನ್ನು ಗುರುತುಪಡಿಸಿರುವ ಹಾಗೂ ಕೆರೆಯಲ್ಲಿ ಯಾವುದೇ ಒತ್ತುವರಿ ಇರುವುದಿಲ್ಲವೆಂಬ ಬಗ್ಗೆ ದೃಢೀಕರಣ ಪ್ರತಿಯನ್ನು ವರದಿಯೊಂದಿಗೆ ಸಲ್ಲಿಸುವುದು.
7. ಕೆರೆಗಳಿಗೆ ನೇರವಾಗಿ ಅಥವ ಪರೋಕ್ಷವಾಗಿ ಯಾವುದೇ ಭಾದಕವಾಗುವ ಅಂಶಗಳನ್ನು ಯೋಜನೆಯಲ್ಲಿ ಸೇರಿಸತಕ್ಕದ್ದಲ್ಲ.
8. ಕೆರೆ ಅಭಿವೃದ್ಧಿಯಲ್ಲಿ ಸಮುದಾಯಗಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ತೆಗೆದು ಕೊಳ್ಳಲಾಗುವ ಕ್ರಮಗಳ ವಿವರಗಳನ್ನು ಯೋಜನಾ ವರದಿಯಲ್ಲಿ ನೀಡಬೇಕಿರುತ್ತದೆ.

ವರದಿಯಲ್ಲಿ ಈ ಕೆಳಗಿನ ವಿವರಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.

1. ಯೋಜನೆಯನ್ನು ಪ್ರಸ್ತಾಪಿಸಿರುವ ಪ್ರಾಧಿಕಾರ/ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಇತರ ಕೆರೆಗಳ ಪರಿಸ್ಥಿತಿ ಹಾಗೂ ಅವುಗಳ ಅಭಿವೃದ್ಧಿ ಅವಶ್ಯಕತೆ ಬಗೆಗಿನ ವಾಸ್ತವಿಕ ವಿವರಗಳು.
2. ಸದರಿ ಕೆರೆಯನ್ನು ಆದ್ಯತೆಯ ಮೇಲೆ ಪರಿಗಣಿಸಲಾಗಿರುವುದಕ್ಕೆ ಕಾರಣಗಳು.
3. ಪ್ರಸ್ತಾಪಿತ ಯೋಜನೆಯ ಮೂಲ ಉದ್ದೇಶಗಳ ವಿವರಣೆ.
4. ಕೆರೆಯ ವಿನ್ಯಾಸಿತ ಸಾಮರ್ಥ್ಯ.
5. ಕೆರೆಯ ಹಾಲಿ ಸಾಮರ್ಥ್ಯ.
6. ಕೆರೆಯ ಪೂರ್ಣ ಸಾಮರ್ಥ್ಯವನ್ನು ಸ್ಥಾಪಿಸಲು ಯೋಜನೆಯಲ್ಲಿ ಅಳವಡಿಸಿ ಕೊಳ್ಳಲಾಗಿರುವ ಅಂಶಗಳ ಸಂಕ್ಷಿಪ್ತ ವಿವರ.
7. ಯೋಜನಾ ವರದಿಯಲ್ಲಿ ಸೇರಿಸಿಕೊಳ್ಳಲಾಗಿರುವ ಎಲ್ಲಾ ಅವಕಾಶಗಳ (Provisions) ಅವಶ್ಯಕತೆ ಮತ್ತು ಅವುಗಳಿಂದ ಯೋಜನೆಯ ಉದ್ದೇಶ ಸಾಧನೆಯಾಗುವ ಬಗ್ಗೆ ವಿವರಗಳು.

ನಂ. ಮಾಹಿ. ಕರ್ನಾಟಕ ರಾಜ್ಯ ಜಲ ನಿಗಮ ನಿಯಮಿತ ಕಟ್ಟಡ, ಬಳ್ಳಾರಿ ರಸ್ತೆ, ಫ್ಲ್ಯಾಟ್, ಬೆಂಗಳೂರು-560024.
ದೂರವಾಣಿ 080-23513711/12, 080-22034173 ಇ-ಮೇಲ್-tankdevelopmentauthorityk@gmail.com

ಪು.ತಿ.ನೋ

ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕಾದ ಅತ್ಯವಶ್ಯಕ ಅಂಶಗಳು

1. ಕೆರೆಯ ಗಡಿಗಳನ್ನು ಗುರುತಿಸಿ, ಗಡಿಗಳನ್ನು ಒತ್ತುವರಿಯಿಂದ ಪ್ರತಿಬಂಧಿಸುವ ಅಂಶಗಳು.
2. ಮಳೆ ನೀರು ಸ್ವಾಭಾವಿಕವಾಗಿ ಕೆರೆಯೊಳಗೆ ಹರಿದು ಬರಲು ಅವಶ್ಯಕ ಕಾಲುವೆಗಳ ಅಭಿವೃದ್ಧಿ.
3. ಕೆರೆಯ ವೇಸ್ಟ್‌ವಿಯರ್ ಮತ್ತು ತೂಬುಗಳ ನವೀಕರಣ.
4. ಕೆರೆ ಏರಿ ಬಲಗೊಳಿಸುವ ಮತ್ತು ಕೆರೆ ಏರಿಯ ಮುಂಭಾಗದ ಮತ್ತು ಹಿಂಭಾಗದ ಇಳಿಜಾರುಗಳನ್ನು ಅವಶ್ಯಕ ರಿವಿಟ್‌ಮೆಂಟ್ ಮತ್ತು ಹುಲ್ಲು ಹಾಸಿನಿಂದ ಸಂರಕ್ಷಿಸುವ ಕಾಮಗಾರಿ.
5. ಕೆರೆಗಳನ್ನು ಪೂರ್ವಸ್ಥಿತಿಗೆ ತರಲು ಅವಶ್ಯಕವಾದ ಇನ್ನಿತರ ಕಾಮಗಾರಿಗಳು.
6. ಸಂಸ್ಕರಿಸದಿರುವ ಚರಂಡಿ ನೀರು ಕೆರೆಗೆ ಹರಿದು ಬರುವುದನ್ನು ಪ್ರತಿಬಂಧಿಸುವ ಅಂಶಗಳು.

ಈ ಮೇಲಿನ ಅಂಶಗಳನ್ನು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ-2014 ರಲ್ಲಿನ ವಿವಿಧ ಪ್ರಕರಣಗಳ ವಿವರಣೆಗಳ ಆಧಾರದಲ್ಲಿ ನಿಗದಿಪಡಿಸಲಾಗಿದ್ದು, ಅಧಿನಿಯಮದ 31ನೇ ಪ್ರಕರಣದಂತೆ "ಅಧಿನಿಯಮದಡಿಯಲ್ಲಿಯ ಒಂದು ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಮಾಡಿದ್ದಲ್ಲಿ, ಸರ್ಕಾರದ ಇಲಾಖೆಯ ಮುಖ್ಯಸ್ಥ ಅಥವಾ ಅಂಥ ಸ್ಥಳೀಯ ಅಥವಾ ಸಂದರ್ಭಾನುಸಾರವಾಗಿ ಇತರ ಪ್ರಾಧಿಕಾರದ ಪ್ರಭಾರದಲ್ಲಿರುವ (ಯಾವುದೇ ಹೆಸರಿನಿಂದ ಕರೆಯಲ್ಪಡುವ) ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು, ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅತನ ವಿರುದ್ಧ ಕೈಗೊಳ್ಳಲಾಗುವ ಕ್ರಮಗಳಿಗೆ ಅತನು ಬದ್ಧನಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡನೀಯನಾಗತಕ್ಕದ್ದು".

14/3

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ.

ಪ್ರತಿಯನ್ನು :

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ ಅವರ ಮಾಹಿತಿಗಾಗಿ ಸಲ್ಲಿಸಿದೆ.
2. ನಗರ ಮತ್ತು ಯೋಜನಾ ನಿರ್ದೇಶಕರು, ಬಹುಮಹಡಿ ಕಟ್ಟಡ, 4ನೇ ಹಂತ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು.
3. ಎಲ್ಲಾ ಆಯುಕ್ತರು, ನಗರ/ಸ್ಥಳೀಯ ಯೋಜನಾ ಪ್ರಾಧಿಕಾರಗಳು.
4. ಎಲ್ಲಾ ವಿಭಾಗೀಯ ಅಧಿಕಾರಿ ಮತ್ತು ಪ್ರಾಧಿಕೃತ ಅಧಿಕಾರಿಗಳು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ.
5. ಕಡತಕ್ಕೆ.

ದೂರವಾಣಿ: 080-22510731-12, 080-2203417 ಇ-ಮೇಲ್-tankdevelopmentauthoritykar@gmail.com